

ಹೆರಬೇಕು ಎಂದು ಮನವರಿಕೆ ಮಾಡಬೇಕು. ಜೊತೆಗೆ ಸಮಾನ ಬದುಕನ್ನು ನಡೆಸುವ ನಂಬಿಕೆ ನೀಡಬೇಕು. ಆದರೆ ಹೆರಲೇಬೇಕು ಎಂದು ಒತ್ತಡ ಹೇರುವುದು ತಪ್ಪಾಗುತ್ತದೆ. ಇವೆಲ್ಲಾ ವೈಯಕ್ತಿಕ ನಿರ್ಧಾರಗಳು. ನಾವು ಅದನ್ನು ಗೌರವಿಸಬೇಕು' ಎನ್ನುವುದು ಅವರ ಸ್ಪಷ್ಟ ನಿಲುವು.

## ಸಂತಾನಹೀನತೆಯಲ್ಲಿ ಪುರುಷರ ಪಾಲು

ಇನ್ನೊಂದು ಮುಖ್ಯವಾದ ವಿಷಯ, ಬಂಜೆತನವನ್ನು ಅನುಭವಿಸುತ್ತಿರುವ ದಂಪತಿಗಳಲ್ಲಿ ಶೇ. 45–55ರಷ್ಟು ಗಂಡಸರಲ್ಲಿಯೇ ಸಮಸ್ಯೆ ಇದೆ. ವೀರ್ಯಾಣು ಸಂಖ್ಯೆಯಲ್ಲಿ ಕೊರತೆ, ಆರೋಗ್ಯವಂತ ವೀರ್ಯಾಣುವಿನ ಕೊರತೆ, ಲೈಂಗಿಕ ಕ್ರಿಯೆಯನ್ನು ಪೂರ್ಣಗೊಳಿಸಲು ಆಗದಿರುವುದು ಕಾರಣವಾಗಿವೆ. ಒತ್ತಡದ ಜೀವನಶೈಲಿ, ಉದ್ಯೋಗದ ಕಾರಣದಿಂದ ಬಂಜೆತನಕ್ಕೆ ಪುರುಷರೂ ಹೆಚ್ಚಿನ ಸಂಖ್ಯೆಯಲ್ಲಿ ಕಾರಣವಾಗುತ್ತಿದ್ದಾರೆ. ಇಂದಿನ ಹೆಣ್ಣುಮಕ್ಕಳಲ್ಲಿ ಬಂಜೆತನ ಕಂಡುಬರಲು ವೀರ್ಯಾಣುವಿನ ಗುಣಮಟ್ಟವೂ ಕಾರಣವಾಗಿರುತ್ತದೆ. ಹಾಗಾಗಿ ಬಂಜೆತನ ತಪಾಸಣೆಯಲ್ಲಿ ವೀರ್ಯಾಣುವಿನ ಗುಣಮಟ್ಟವನ್ನು ಪರಿಶೀಲಿಸಲು ವೈದ್ಯರು ಶಿಫಾರಸ್ಸು ಮಾಡುತ್ತಾರೆ. ಫಲವಂತಿಕೆಗಾಗಿ ಯತ್ನಿಸುವಾಗ ಪುರುಷರ ಪಾಲ್ಗೊಳ್ಳುವಿಕೆಯೂ ಮಹತ್ವದ ಪಾತ್ರವಹಿಸುವುದು ಇದೇ ಕಾರಣದಿಂದ. ಬಂಜೆತನದ ವಿಷಯ ಬಂದಾಗ ಹೆಣ್ಣುಮಕ್ಕಳನ್ನಷ್ಟೇ ಕೇಂದ್ರೀಕರಿಸುವುದು ಸರಿಯಲ್ಲ.

‘ವಿಶ್ವ ಆರೋಗ್ಯ ಸಂಸ್ಥೆ’ ಭಾರತದಲ್ಲಿನ ಬಂಜೆತನದ ಬಗ್ಗೆ ನೀಡಿರುವ ವರದಿಯ ಪ್ರಕಾರ, ಬಂಜೆತನದ ಒಟ್ಟೂ ಪ್ರಕರಣಗಳ ಪೈಕಿ ಶೇ. 40 ಬಂಜೆತನ ಪ್ರಕರಣಗಳು ಪುರುಷರಿಗೆ, ಶೇ. 40 ಮಹಿಳೆಯರಿಗೆ ಮತ್ತು ಶೇ. 20ರಷ್ಟು ಪ್ರಕರಣಗಳು ಇಬ್ಬರಿಗೂ ಸಂಬಂಧಿಸಿವೆ. ಬಂಜೆತನಕ್ಕೆ ಸಂಬಂಧಿಸಿದ ಎಲ್ಲಾ ಪರೀಕ್ಷೆಗಳು ನಡೆದ ಮೇಲೂ ಕಾರಣ ನಿಗೂಢವಾಗಿಯೇ ಉಳಿಯುವ ಪ್ರಕರಣಗಳ ಸಂಖ್ಯೆ ಶೇ. 25ಕ್ಕಿಂತ ಹೆಚ್ಚಿದೆ. ಪ್ರಕರಣವನ್ನು ವಿವರಿಸಲಾಗದೆ ಇರುವುದರಿಂದ ಇದನ್ನು ಮತ್ತು ವಯಸ್ಸಾದ ಮೇಲೆ ಬರುವ ಬಂಜೆತನವನ್ನು ನೈಸರ್ಗಿಕ ಎಂದು ಪರಿಗಣಿಸಬಹುದು.

ಮಕ್ಕಳನ್ನು ಹುಟ್ಟಿಸುವ ಮೂಲ ಉದ್ದೇಶಗಳನ್ನು ಹುಡುಕುತ್ತಾ ಹೋದರೆ, ತಂದೆ ತಾಯಿಗೆ ಕೊನೆಗಾಲದಲ್ಲಿ ಆಸರೆಯಾಗಬೇಕು ಎಂಬ ಉತ್ತರ ಸಾಮಾನ್ಯವಾಗಿ ಎಲ್ಲರಿಂದ, ಎಲ್ಲಾ ವರ್ಗದವರಿಂದ ಸಿಗುತ್ತದೆ. ಈ ಹೊಣೆಯನ್ನು ಈಗಿನ ಮಕ್ಕಳಿಗೆ ನಿಭಾಯಿಸಲು ಸಾಧ್ಯವಾಗುತ್ತಿದೆಯೆ ಎಂಬುದು ಪ್ರಶ್ನೆ. ಕೌಟುಂಬಿಕ ಕಲಹ, ಶಿಕ್ಷಣಕ್ಕಾಗಿ ತಂದೆ ತಾಯಿಯಿಂದ ದೂರ ಹೋಗಲೇಬೇಕಾದ ಅನಿವಾರ್ಯತೆ, ನಂತರ ಉದ್ಯೋಗದ ಸಲುವಾಗಿ ದೇಶವನ್ನೂ ತೊರೆದು ಹೋಗುತ್ತಿರುವವರ ಸಂಖ್ಯೆಯೂ ಹೆಚ್ಚಿದೆ. ಮಕ್ಕಳಿಗೆ ಮದುವೆಯಾದ ಮೇಲೆ ಅವರು ತಮ್ಮದೇ ಸಂಸಾರದ ಜಂಜಾಟದಲ್ಲಿ ತೊಡಗಿ ತಂದೆ ತಾಯಿಯನ್ನು ನೋಡಿಕೊಳ್ಳಲಾಗದ ಪರಿಸ್ಥಿತಿ ಸಹ ಇದೆ. ಇಂದು ಹಳ್ಳಿಗಳಲ್ಲಿ ವಯಸ್ಸಾದರಷ್ಟೇ ಉಳಿದುಕೊಂಡಿದ್ದಾರೆ ಎಂಬ ಮಾತುಗಳನ್ನು ‘ಹೌದು’ ಎಂದು ಒಪ್ಪಲಾಗದ, ‘ಇಲ್ಲ’ ಎಂದು ಹೇಳಲಾಗದ ಸ್ಥಿತಿಯಲ್ಲಿ ನಾವಿದ್ದೇವೆ. ಹೀಗಿರುವಾಗ ಸಂತಾನಹೀನತೆಯನ್ನು ನಾವು ಹೇಗೆ ನೋಡಬೇಕು? ಹೇಗೆ ಸ್ವೀಕರಿಸಬೇಕು?

ಇದು ಸುಲಭಕ್ಕೆ ಮುಗಿಯುವ ಚರ್ಚೆಯಲ್ಲ. ಬರೀ ತರ್ಕ, ವಾದಗಳ ಮೂಲಕ ಪರಿಹಾರ ಕಂಡುಕೊಳ್ಳಬಹುದಾದ ಸಂಗತಿಯೂ ಅಲ್ಲ. ಬದಲಿಗೆ ವೈಯಕ್ತಿಕ ನೆಲೆಯಲ್ಲಿ, ಮಾನವೀಯ ದೃಷ್ಟಿಯಲ್ಲಿ ಯೋಚಿಸಿ, ವಾಸ್ತವವನ್ನು ಒಪ್ಪಿಕೊಂಡು ಇರುವ ಬದುಕನ್ನು ಅಪ್ಪಿಕೊಳ್ಳುವುದೇ ಹೆಚ್ಚು ಸರಿಯಾದ ದಾರಿ.

2016ರಲ್ಲಿ ಮದುವೆಯಾದ ಬಿಪಾಷಾ ಬಸು ಅವರಿಗೆ ಈಗ 43 ವರ್ಷ. ಮಾಧ್ಯಮದವರು ಕಳೆದ ವರ್ಷ ಆಕೆಗೆ, ‘ನೀವು ಯಾವಾಗ ತಾಯಿ ಆಗ್ತೀರಾ’ ಎಂದು ಕೇಳಿದಾಗ ಆಕೆ ಕೊಟ್ಟ ಉತ್ತರ ಹೀಗಿದೆ:

‘ನೈಸರ್ಗಿಕ ರೀತಿಯಲ್ಲಿ ನಾನು ತಾಯಿ ಆಗೋಕೆ ಇಷ್ಟಪಡ್ತೀನಿ. ಅದು ಸಾಧ್ಯವಾಗದಿದ್ದಲ್ಲಿ ವೈದ್ಯಕೀಯ ಸಹಾಯ ಪಡಿತೀವಿ. ಆ ರೀತಿಯಲ್ಲೂ ಮಗು ಆಗಿಲ್ಲ ಅಂದ್ರೆ ದತ್ತು ಪಡಿತೀವಿ. ಅದು ಕೂಡ ಸಾಧ್ಯವಾಗಲಿಲ್ಲ ಅಂದ್ರೆ ದೇಶದಲ್ಲಿ ತಂದೆ ತಾಯಿ ಇಲ್ಲದ ಸಾಕಷ್ಟು ಮಕ್ಕಳಿದ್ದಾರೆ, ಅವರಿಗೆ ನಮ್ಮ ಕೈಲಾದಷ್ಟು ಸಹಾಯ ಮಾಡ್ತೀವಿ. ಹಾಗೆ ಸಹಾಯ ಮಾಡಬೇಕಾದಿದ್ದು ನಮ್ಮ ಸಾಮಾಜಿಕ ಜವಾಬ್ದಾರಿ ಕೂಡ.’

ಬಿಪಾಷಾ ಅವರ ಮಾತುಗಳಲ್ಲಿ ಸಂತಾನಹೀನತೆಯನ್ನು ಹೆಣ್ಣಿನ ವ್ಯಕ್ತಿತ್ವಕ್ಕೆ ಆರೋಪಿಸುವ ಹುನ್ನಾರವೂ ಇಲ್ಲ; ತನ್ನ ವ್ಯಕ್ತಿತ್ವಕ್ಕೆ ಕೋಳ ತೊಡಗಿಸುವ ಸಾಂಪ್ರದಾಯಿಕರ ವಿರುದ್ಧ ಪ್ರತಿಭಟಿಸುವುದಕ್ಕಾಗಿ ಮಕ್ಕಳನ್ನೇ ಹೆರಲಾರೆ ಎಂಬ ಅತಿರೇಕವೂ ಇಲ್ಲ. ಬದಲಿಗೆ ಅದನ್ನೊಂದು ಸಹಜವಾದ ವಿದ್ಯಮಾನವಾಗಿ ಪರಿಗಣಿಸುವುದರ ಜೊತೆಗೆ, ತಮ್ಮ ಕುಟುಂಬದ ಪರಿಕಲ್ಪನೆಯೊಳಗೆ ಸಮಾಜವನ್ನೂ ಸೇರಿಸಿಕೊಳ್ಳಲು ಒತ್ತಾಯಿಸುವಂತಿದೆ. ಆದರೆ, ಸಿನಿಮಾ ನಟಿಯೊಬ್ಬಳು ಗರ್ಭಿಣಿಯಾದ ಸಂಗತಿಯನ್ನು ಟೀವಿ ವಾಹಿನಿಯೊಂದು, ‘ಇಡೀ ರಾಜ್ಯವೇ ಸಂಭ್ರಮಿಸಬೇಕಾದ ನ್ಯೂಸ್’ ಎಂಬ ಪ್ರಸಾರ ಮಾಡಿದ ನಮ್ಮ ಸಮಾಜದಲ್ಲಿ ಅಂಥದ್ದೊಂದು ಮಾನವೀಯ ಸ್ಪಂದನ ಸಾರ್ವಜನಿಕ ಪ್ರಕ್ರಿಯೆಯಾಗುವುದು ಯಾವಾಗ? ಅಂತಃಕರಣದ ಮೂಲಸೆಲೆಯನ್ನು ಮುಕ್ತವಾಗಿ ಹರಿಬಿಡುವ ದಿನಗಳು ಬರುವುದು ಯಾವಾಗ?

ಪ್ರತಿಕ್ರಿಯಿಸಿ: feedback@sudha.co.in